ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಕಲಬುರಗಿ.
(ಕರ್ನಾಟಕ ಸರಕಾರ ಸ್ವಾಮ್ಯದ ಉದ್ಯಮ)
ಎಸ್.ಆರ್. ರೆಸಿಡೆನ್ಸಿ, ಪ್ಲಾಟ್ ನಂ: 1881 ಮೊದಲನೆ ಮಹಡಿ,
ಎಲ್.ಎಸ್. ರಾಠಿ ಆಸ್ಪತ್ರೆ ಎದುರುಗಡೆ, ಹಳೆ ಜೇವರ್ಗಿ ರಸ್ತೆ, ಕಲಬುರಗಿ–585103 ಫೋನ್ ನಂ: 08472–232425

The Karnataka Minorities Development Corporation Ltd, Kalaburagi.
(A Govt, of Karnataka Undertaking)
S.R. Residency Plot No: 1881 1st Floor Opp L.S. Rathi Hospital Old Jewargi Road,
Kalaburagi-585103- Phone No: 08472-232425

RTI Sagar

ಸಂಖ್ಯೆ:ಕಅನಿನಿ/ಕ/ಮಾಹ/ಸಿಆರ್/2021–22/19 ದಿನಾಂಕ: 22.04.2022

ಗೆ,

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ),

ಬೆಂಗಳೂರು

ಮಾನ್ಯರೇ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005 ಅಡಿ 19(3) ರ ಅಡಿಯಲ್ಲಿ ಕಲಬುರಗಿ ನಿಗಮದ ವ್ಯಾಪ್ತಿಗೆ ಬರುವ 4(1) **A** 4(1) **B** ಅನ್ನು ತಯ್ಯಾರಿಸಿ ವೆಬ್ ಸೈಟನಲ್ಲಿ ಅಳವಡಿಸುವ ಕುರಿತು.

ಉಲ್ಲೇಖ: ಕೇಂದ್ರ ಕಛೇರಿ ಆದೇಶ ಸಂಖ್ಯೆ:ಕಅನಿ/ಸಿಬ್ಬಂಧಿ/ಹೆಪ್ರ//ಸಿಆರ್/2021–22/3491.ದಿ:23.03.2022

* * * * *

ಮೆಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಕಲಬುರಗಿ ಜಿಲ್ಲೆಗೆ ಸಂಭಂಧಿಸಿದ ಮಾಹಿತಿ ಹಕ್ಕು ಅಧಿನಿಯಮ,2005ರ ಕಲಂ 19(3)ರಡಿಯಲ್ಲಿ 4(1) **A** 4(1) **B** ನ್ನು ಸಿದ್ದಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಹಾಗೂ ಈ ಮೇಲ್ ಮುಖಾಂತರವು ಕೂಡಾ ಸದರಿ ಮಾಹಿಯನ್ನು ಮಾನ್ಯರಿಗೆ ಈ ಮೂಲಕ ಸಲ್ಲಿಸಲಾಗಿದೆ

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ
ನಿಗಮ (ನಿ), ಕಲಬುರಗಿ.

K M D C LTD.
Head Office, Bangalore
26 APR 2022
No. 461

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಕಲಬುರಗಿ**

(ಕರ್ನಾಟಕ ಸರಕಾರ ಸ್ವಾಮ್ಯದ ಉದ್ಯಮ)

ಎಸ್.ಆರ್. ರೆಸಿಡೆನ್ಸಿ, ಪ್ಲಾಟ್ ನಂ: 1881 ಮೊದಲನೆ ಮಹಡಿ,

ಎಲ್.ಎಸ್. ರಾಠಿ ಆಸ್ಪತ್ರೆ ಎದುರುಗಡೆ, ಹಳೆ ಜೇವರ್ಗಿ ರಸ್ತೆ, ಕಲಬುರಗಿ–585103 ಫೋನ್ ನಂ: 08472–232425

**The Karnataka Minorities Development Corporation Ltd, Kalaburagi.**

(A Govt, of Karnataka Undertaking)

S.R. Residency Plot No: 1881 1st Floor Opp L.S. Rathi Hospital Old Jewargi Road, Kalaburagi-585103- Phone No: 08472-232425

ಸಂ:ಕ.ಅ.ಅ.ನಿ/ಕ/2019–20/19 ದಿನಾಂಕ: 22-04-2022

**ನಿಗಮದ ಸ್ಥಾಪನೆ**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 17.02.1986 ರಲ್ಲಿ ಸ್ಥಾಪನೆಯಾಗಿದ್ದು ಈ ನಿಗಮದಿಂದ ಮತೀಯ ಅಲ್ಪಸಂಖ್ಯಾತರು ಅಂದರೆ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರ ಏಳಿಗೆಗಾಗಿ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯರೂಪಕ್ಕೆ ತರಲಾಗುತ್ತಿದೆ.

ಕಲಬುರಗಿ ಜಿಲ್ಲೆಯಲ್ಲಿ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು 2011ರ ಜನಗಣತಿ ಪ್ರಕಾರ 5,36,749 ಇದ್ದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ. 19.99 ಆಗಿರುತ್ತದೆ. ರಾಜ್ಯದಲ್ಲಿ ಹಾಗೂ ಜಿಲ್ಲೆಯಲ್ಲಿ ವಾಸಿಸುತ್ತಿರುವ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುತ್ತಾರೆ. ಅಲ್ಪಸಂಖ್ಯಾತ ಸಮುದಾಯದ ಬಹುಪಾಲು ಜನರು ಬಡತನದ ರೇಖೆಯ ಕೆಳಗಿದ್ದು ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮ ಪಡಿಸುವ ಸಲುವಾಗಿ ನಿಗಮವನ್ನು ಸ್ಥಾಪಿಸಲಾಗಿದೆ.

**ನಿಗಮದ ಉದ್ದೇಶ**

ಮತೀಯ ಅಲ್ಪಸಂಖ್ಯಾತರ ಸಮುದಾಯದ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವ ಜವಾಬ್ದಾರಿಯನ್ನು ಮೊದಲು ಸ್ಥಾಪಿಸಿದ್ದ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ (ಡಿ.ದೇವರಾಜ ನಿಗಮದಿಂದ ಅನುಷ್ಠಾನಗೊಳ್ಳುತ್ತಿದ್ದ ಅಭಿವೃದ್ಧಿ ನಿಗಮದಿಂದ ಯೋಜನೆಗಳು ಮತೀಯ ಅಲ್ಪಸಂಖ್ಯಾತರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೆಚ್ಚಿನ ಪರಿಣಾಮವನ್ನು ಬೀರುತ್ತಿಲ್ಲ ಎಂಬ ಅಂಶದಿಂದಾಗಿ ಮತ್ತು ರಾಜ್ಯದ ಮತೀಯ ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸುವ ಸಲುವಾಗಿ ಹಾಗೂ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಏಕೈಕ ಉದ್ದೇಶದಿಂದ ಆಗಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗ್ಡೆಯವರ ನೇತೃತ್ವದ ಸರ್ಕಾರವು ದಿನಾಂಕ: 07.02.1986 ರಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ' ಎಂಬ ಪ್ರತ್ಯೇಕ ನಿಗಮವನ್ನು ಸ್ಥಾಪಿಸಿತು. ರಾಜ್ಯದ ಮತೀಯ ಅಲ್ಪಸಂಖ್ಯಾತ ಸಮುದಾಯದ ಕಡುಬಡವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಮತ್ತು ಅವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವುದು ಹಾಗೂ ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಮುಖ್ಯ ಉದ್ದೇಶವಾಗಿದೆ.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ
ನಿಗಮ (ನಿ) ಕಲಬುರಗಿ

**ನಿಗಮದ ರಚನೆ**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರದ ಸ್ವಾಮ್ಯದ ಉದ್ಯಮವಾಗಿದ್ದು 1956 ರ ಕಂಪನಿ ಕಾಯ್ದೆಯ ಅನ್ವಯ ಸ್ಥಾಪಿಸಲ್ಪಟ್ಟಿದೆ. ನಿಗಮದ ಇದುವರೆಗಿನ ಅಧಿಕೃತ ಷೇರು ಬಂಡವಾಳವು ರೂ. 600.00ಕೋಟಿ ಇರುತ್ತದೆ. ಪಾವತಿಸಿದ ಬಂಡವಾಳ ರೂ. 99.78 ಕೋಟಿ ಇರುತ್ತದೆ. ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ನಿಗಮವು ಕಾರ್ಯನಿರ್ವಹಿಸುತ್ತಿದೆ. ನಿಗಮದ ನೋಂದಾಯಿತ ಕಛೇರಿ ಬೆಂಗಳೂರಿನಲ್ಲಿ ಇದ್ದು ಇದರ ಜಿಲ್ಲಾ ಕಛೇರಿಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇರುತ್ತದೆ. ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಗಳನ್ನು ನಿಗಮದ ಜಿಲ್ಲಾ ಕಛೇರಿಗಳ ಮೂಲಕ ಅನುಷ್ಠಾನಗೊಳಿಸಿ ಮತಿಯ ಅಲ್ಪಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಉದ್ದೇಶವಾಗಿದೆ.

**ನಿಗಮದ ಸಂಘಟನಾ ವ್ಯವಸ್ಥೆ**

ನಿಗಮದ ನಿರ್ದೇಶಕರ ಮಂಡಳಿಗೆ ಸರ್ಕಾರದಿಂದ ನಾಮ ನಿರ್ದೇಶಿತಗೊಂಡಿರುವ ಮಾನ್ಯ ಅಧ್ಯಕ್ಷರು ನೇಮಕಗೊಂಡಿರುತ್ತಾರೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ನಿಗಮದ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಆಡಳಿತಾತ್ಮಕ ನಿಯಂತ್ರಣದಲ್ಲಿ ಕೇಂದ್ರ ಕಛೇರಿಯಲ್ಲಿ ಪ್ರಧಾನ ವ್ಯವಸ್ಥಾಪಕರು, ಉಪ ಪ್ರಧಾನ ವ್ಯವಸ್ಥಾಪಕರು (ಯೋಜನೆ), ಪ್ರಧಾನ ಹಣಕಾಸು ಅಧಿಕಾರಿ, ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು), ಕಂಪನಿ ಕಾರ್ಯದರ್ಶಿ, ಉಪ ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಸಿಬ್ಬಂದಿ) ಲೆಕ್ಕ ಅಧೀಕ್ಷಕರು, ಅಭಿವೃದ್ಧಿ ಅಧಿಕಾರಿ, ಅಭಿವೃದ್ಧಿ ಪರಿವೀಕ್ಷಕರು ಹಾಗೂ ಪ್ರಥಮ ದರ್ಜೆ ಸಹಾಯಕರು ಹಾಗೂ ಇತರೆ ಸಿಬ್ಬಂದಿ ವರ್ಗದವರು ಕರ್ತವ್ಯನಿರ್ವಹಿಸುತ್ತಿದ್ದಾರೆ. ನಿಗಮದ ಜಿಲ್ಲಾ ಕಛೇರಿಗಳಲ್ಲಿ, ಜಿಲ್ಲಾ ವ್ಯವಸ್ಥಾಪಕರು, ಅಭಿವೃದ್ಧಿ ಅಧಿಕಾರಿ, ಅಭಿವೃದ್ಧಿ ಪರಿವೀಕ್ಷಕ ಮತ್ತು ಕಂಪ್ಯೂಟರ್ ಆಪರೇಟರ್‌ಗಳನ್ನು ಒಳಗೊಂಡ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**2021–22ನೇ ಸಾಲಿನಲ್ಲಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ**

1. **ಅರಿವು ಸಾಲ ಯೋಜನೆ:** ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ/ನೀಟ್) ಆಯ್ಕೆಯಾದ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಬೋಧನಾ ಶುಲ್ಕದ 50% ಗರಿಷ್ಟ ರೂ. 2.00 ಲಕ್ಷಗಳವರೆಗೆ ಸಾಲವನ್ನು ನೀಡಲಾಗುತ್ತದೆ.

   ಸಿ.ಇ.ಟಿ ಯಿಂದ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ಬಿ.ಡಿ.ಎಸ್. ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ರೂ.30,000/– ಸಾಲ ನೀಡಲಾಗುತ್ತದೆ.

   ಸಿ.ಇ.ಟಿ ಯಿಂದ ಅಂದರೆ ಇಂಜಿನಿಯರಿಂಗ್, ಆಯುರ್ವೇದ, ಐ.ಎಸ್.ಎಂ.ಹೆಚ್ ವಿದ್ಯಾಭ್ಯಾಸ ಪಡೆಯಲು ಇತರೆ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ರೂ. 30,000/– ಸಾಲ ನೀಡಲಾಗುತ್ತದೆ.

2. **ಶ್ರಮಶಕ್ತಿ ಯೋಜನೆ:** ಅಲ್ಪಸಂಖ್ಯಾತರ ಸಮುದಾಯದ ವೃತ್ತಿ ಕುಲಕಸುಬುದಾರರಿಗೆ ರೂ.25,000/–ರಿಂದ ಗರಿಷ್ಠ ರೂ.50,000/–ವರೆಗೆ ಶೇಕಡಾ 4 ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಇದರಲ್ಲಿ ನಿಗದಿತ ಅವಧಿಯೊಳಗೆ ಸಾಲ ಮರುಪಾವತಿ ಮಾಡುವ ಅರ್ಜಿದಾರರಿಗೆ ಶೇಕಡಾ 50% ರ ಬ್ಯಾಕ್ ಎಂಡ್ ಸಹಾಯಧನ ಸಿಗುತ್ತದೆ. ಘಟಕ ವೆಚ್ಚ ರೂ.50,000/–ಗಳ ಸಾಲದ ಮಂಜೂರಾತಿಯು ಸಾಂಪ್ರದಾಯಿಕ, ಪರಂಪರಾಗತ, ಕುಶಲಕರ್ಮಿಗಳು/ವೃತ್ತಿ ಕುಲಕಸುಬುದಾರರಿಗೆ ಅನ್ವಯವಾಗುತ್ತದೆ. ಇತರೆ ವೃತ್ತಿಗಳಿಗೆ ಯೋಜನೆಯ ಲಾಭದಾಯಕತೆ ಮತ್ತು ಆದಾಯಗಳಿಗೆ ಅನುಗುಣವಾಗಿ ರೂ.25,000/–ಕ್ಕೆ ಮೀರದಂತೆ ಸಾಲವನ್ನು ಮಂಜೂರು ಮಾಡಲಾಗುತ್ತದೆ. ಫಲಾನುಭವಿಯು ತಾನು ಪಡೆದ ಸಾಲವನ್ನು 36 ತಿಂಗಳೊಳಗಾಗಿ ಮರುಪಾವತಿ ಮಾಡಲು ವಿಫಲವಾದಲ್ಲಿ ಶೇ.50 ರಷ್ಟು **ಬ್ಯಾಕ್‌ಎಂಡ್** ಸಹಾಯಧನವನ್ನು ಸಹ ಸಾಲವೆಂದು ಪರಿಗಣಿಸಲಾಗುತ್ತದೆ.

**ಘಟಕ ವೆಚ್ಚ ರೂ**.50.000/–ಗಳ ಸಾಲದ ಮಂಜೂರಾತಿಯು ಸಾಂಪ್ರದಾಯಿಕ ಪಾರಂಪರಾಗತ ಕುಶಲಕರ್ಮಿಗಳು/ವೃತ್ತಿ ಕುಲಕಸುಬುದಾರರಿಗೆ ಅನ್ವಯವಾಗುತ್ತದೆ. ಶ್ರಮಶಕ್ತಿ ಯೋಜನೆಯಡಿಯಲ್ಲಿ ಮಂಜೂರಾದ ಫಲಾನುಭವಿಗಳ ಬ್ಯಾಂಕ್ ಖಾತೆ ಮತ್ತು ಐಎಫ್‌ಎಸ್‌ಸಿ ಸಂಖ್ಯೆ ಮತ್ತು ಫಲಾನುಭವಿಗಳ ಬ್ಯಾಂಕ್ ಖಾತೆಯ ವಿವರದ ಮೊದಲನೆ ಪುಟ ಕೇಂದ್ರ ಕಛೇರಿಗೆ ಸಲ್ಲಿಸಬೇಕು, ಸಾಲ ಪಡೆದು ಫಲಾನುಭವಿಯು ಉದ್ದೇಶಿತ ವೃತ್ತಿಗೆ ಮಾತ್ರ ಸಾಲವನ್ನು ಬಳಸಿಕೊಳ್ಳಬೇಕು.

**ಆಯ್ಕೆ ವಿಧಾನ:**–ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ. ಇದರಲ್ಲಿ ಶೇ.50ರಷ್ಟು ಸಾಲವನ್ನು ಬ್ಯಾಕ್‌ಎಂಡ್ ಸಹಾಯಧನವಾಗಿ ಪರಿಗಣಿಸಲಾಗುವುದು. ಈ ಸಾಲಕ್ಕೆ ಶೇ.4%ರ ಬಡ್ಡಿದರ ವಿಧಿಸಲಾಗುವುದು, ಮೂರು ವರ್ಷದ ಅವಧಿಯೊಳಗೆ ಸಾಲ ಮರುಪಾವತಿಸಿದಾಗ ಮಾತ್ರ ಶೇ.50ರಷ್ಟು ಸಹಾಯಧನವನ್ನು ಬ್ಯಾಕ್ ಎಂಡ್ ಸಬ್ಸಿಡಿಯಾಗಿ ಸಾಲದ ಖಾತಾ ಮಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ತಪ್ಪಿದಲ್ಲಿ ಪೂರ್ಣ ಮೊತ್ತವನ್ನು ಸಾಲವಾಗಿ ಪರಿಗಣಿಸಲಾಗುವುದು.

3. **ಸಣ್ಣ ಸಾಲ (ಮೈಕ್ರೋ ಕ್ರೆಡಿಟ್) ಯೋಜನೆ:** ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕುಶಲ ಅಥವಾ ಕುಶಲವಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಸಣ್ಣ ಪ್ರಮಾಣದ ವ್ಯಾಪಾರವನ್ನು ಮಾಡಲು ಕನಿಷ್ಠ 10 ಸದಸ್ಯರಿಂದ ಗರಿಷ್ಠ 20 ಸದಸ್ಯರುಗಳನ್ನು ಹೊಂದಿರುವ ಹಾಗೂ ಕನಿಷ್ಠ 01 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಸ್ವ–ಸಹಾಯ ಗುಂಪುಗಳಿಗೆ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ಪ್ರತಿ ಸದಸ್ಯರಿಗೆ ಶೇಕಡಾ 4ರ ಬಡ್ಡಿದರದಲ್ಲಿ ರೂ.10,000/–ಗಳ ಸಾಲ ಸೌಲಭ್ಯ ಇದರಲ್ಲಿ ಶೇ.50 ಸಹಾಯಧನವಾಗಿದೆ.

**ಆಯ್ಕೆ ವಿಧಾನ:**– ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಕೇಂದ್ರ ಕಛೇರಿಯಿಂದ ಸಾಲ ಮಂಜೂರು ಮಾಡಲಾಗುತ್ತದೆ.

4. **ಮೈಕ್ರೋ ಸಾಲ ಯೋಜನೆ (ವೈಯಕ್ತಿಕ) ಮಹಿಳೆಯರಿಗೆ ಮಾತ್ರ:** ಕೋವಿಡ್–19ರ ಹಿಡುಗಿನಿಂದಾಗಿ ತೊಂದರೆಗೊಳಗಾದ, ನಿಗಮದ ಯಾವುದೇ ಯೋಜನೆಯಲ್ಲೂ ಇದುವರೆಗೆ ಸಾಲ, ಸಹಾಯಧನ ಪಡೆಯದ ಕಡುಬಡತನದಲ್ಲಿರುವ ಅಲ್ಪಸಂಖ್ಯಾತ ಸಮುದಾಯದ ಅಂತ್ಯೋದಯ / ಬಿಪಿಎಲ್ ಕಾರ್ಡ್ ಹೊಂದಿರುವ 25 ರಿಂದ 50 ವಯೋಮಾನದೊಳಗಿನ ಮಹಿಳೆಯರಿಗೆ ತಳ್ಳುವ ಗಾಡಿಯಲ್ಲಿ ವ್ಯಾಪಾರ, ಬೀದಿ ವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣಿ ಅಂಗಡಿ, ಅರಿಷಿನ/ಕುಂಕುಮ, ಅಗರಬತ್ತಿ/ಕರ್ಪೂರ, ಪಾದಚಾರಿ ಮಾರ್ಗದಲ್ಲಿ ಟೀ/ಕಾಫಿ ಮಾರಾಟ, ಎಳನೀರು ವ್ಯಾಪಾರ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ, ಇನ್ನಿತರ ಸಣ್ಣ ವ್ಯಾಪಾರ ನಡೆಸಲು ಆರಂಭಿಕ ಬಂಡವಾಳಕ್ಕಾಗಿ ರೂ.10,000/– ಮೊತ್ತದ (ರೂ.8000/–ಸಾಲ + ರೂ.2000/–ಸಬ್ಸಿಡಿ) ಅಲ್ಪಾವಧಿ ಸಾಲ ನೀಡಲಾಗುವುದು.

**ಮೊದಲ ಹಂತ:**

1. ನಿಗಮದ ವೆಬ್‌ಸೈಟಿನಲ್ಲಿ ಹೆಸರು, ವಿಳಾಸ, ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಇತ್ಯಾದಿ ಪ್ರಾಥಮಿಕ ವಿವರಗಳನ್ನು ನೀಡಿ ಅಪ್‌ಲೋಡ್ ಮಾಡಿದಾಗ ಅರ್ಜಿದಾರರು ನೀಡಿದ ಮೊಬೈಲ್ ಸಂಖ್ಯೆಗೆ ಓಟಿಪಿ ಸಂಖ್ಯೆಯೊಂದು ಬರುತ್ತದೆ. ಅದನ್ನು ಆನ್‌ಲೈನಿನಲ್ಲಿ ದಾಖಲಿಸಿದಾಗ ಅರ್ಜಿಯ ವೆಬ್‌ಸೈಟ್‌ನಲ್ಲಿ ರಿಜಿಸ್ಟರ್ ಆಗುತ್ತದೆ. ಅಗ ಅರ್ಜಿದಾರರ ರಿಜಿಸ್ಟರ್ ಸಂಖ್ಯೆ ಮೊಬೈಲಿಗೂ ರವಾನೆಯಾಗುತ್ತದೆ. ನಂತರ ಪುನಃ ರಿಜಿಸ್ಟರ್ ನಂಬರ್ ಮೂಲಕ ವೆಬ್‌ಸೈಟ್‌ಗೆ ಲಾಗಿನ್ ಆಗಿ ಬ್ಯಾಂಕ್ ಖಾತೆ, ಆದಾಯ/ಜಾತಿ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳ ಸ್ಕ್ಯಾನ್ ಕಾಪಿಯನ್ನು ಅಪ್‌ಲೋಡ್ ಮಾಡಬೇಕು. ಸಾಲದ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಆನ್‌ಲೈನಿನಲ್ಲೇ ಭರ್ತಿ ಮಾಡಿ, ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡಿದ ನಂತರ ಸ್ವೀಕೃತಗೊಂಡ ನಿಮ್ಮ ಆನ್‌ಲೈನ್ ಅರ್ಜಿಯ ಎರಡು ಪ್ರತಿಗಳನ್ನು ಪ್ರಿಂಟ್ ಮಾಡಿ ಇಟ್ಟುಕೊಳ್ಳಬೇಕು.

**ಅ) ಅರ್ಜಿ ಸಲ್ಲಿಸುವಾಗ ನೀಡಬೇಕಾದ ದಾಖಲಾತಿಗಳು**

1. ಸರಳ ಅರ್ಜಿ ನಮೂನೆ (ಆನ್‌ಲೈನಿನಲ್ಲಿ ನೀಡಲಾಗಿದೆ)
2. ಆಧಾರ್ ಕಾರ್ಡ್ ಪ್ರತಿ
3. ಬಿಪಿಎಲ್ ಕಾರ್ಡ್/ಅಂತ್ಯೋದಯ ಕಾರ್ಡ್ ಪ್ರತಿ
4. ಬ್ಯಾಂಕ್ ಪಾಸ್ ಪುಸ್ತಕದ ಜರಾಕ್ಸ್ ಪ್ರತಿ, (ಹೆಸರು, ಖಾತೆ ಸಂಖ್ಯೆ, ಫೋಟೋ, ಬ್ಯಾಂಕಿನ ವ್ಯವಸ್ಥಾಪಕರ ಸಹಿ ಇರುವ ಪುಟ ಮತ್ತು ಇತ್ತೀಚಿನ ಎರಡು ತಿಂಗಳ ವ್ಯವಹಾರ ಶಿಲ್ಕು ತೋರಿಸುವ ಪುಟಗಳ ಜರಾಕ್ಸ್)
5. ಜಾತಿ/ಆದಾಯ ಪ್ರಮಾಣ ಪತ್ರ ರೂ. 1,20,000/– ಒಳಗಿರಬೇಕು.
6. ವಿಧವೆಯರು: ಪಿಂಚಣಿ ದಾಖಲೆ ಅಥವಾ ಗಂಡನ ಮರಣ ಪ್ರಮಾಣ ಪತ್ರ
7. ವಿಕಲಚೇತನರು: ಅಧಿಕೃತ ಅಂಗವೈಕಲ್ಯ ಪ್ರಮಾಣ ಪತ್ರ,

**ಆ) ಅರ್ಜಿ ಸಲ್ಲಿಕೆ ಮತ್ತು ಮಂಜೂರಾತಿ ಪ್ರಕ್ರಿಯೆ:**

1. ಆನ್‌ಲೈನ್ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ನಿಗಮವು ನಿರ್ಧರಿಸಿದ ಮಾನದಂಡಗಳ ಆಧಾರದಲ್ಲಿ ಆನ್‌ಲೈನಿನಲ್ಲಿಯೇ ಜಿಲ್ಲಾವಾರು, ತಾಲೂಕುವಾರು ಮತ್ತು ಗ್ರಾಮ ಪಂಚಾಯಿತುವಾರಾಗಿ ಹಂಚಿಕೆಯಾದ ಗುರಿಗೆ ಅನುಗುಣವಾಗಿ ಫಲಾನುಭವಿಗಳ ಆಯ್ಕೆ ಮಾಡಲಾಗುವುದು.

**ಎರಡನೇ ಹಂತ:**

1. ಹೀಗೆ ಆಯ್ಕೆಯಾದ ಫಲಾನುಭವಿಗಳಿಗೆ ಮೊಬೈಲ್ ಮೂಲಕ ಆಯ್ಕೆಯಾಗಿರುವ ಬಗ್ಗೆ ಸಂದೇಶ ಕಳುಹಿಸಲಾಗುತ್ತದೆ. ಫಲಾನುಭವಿಗಳು ಈಗಾಗಲೇ ತಮಗೆ ನೀಡಿದ ರಿಜಿಸ್ಟರ್ ನಂಬರ್ ಮೂಲಕ ಲಾಗಿನ್ ಆಗಿ ಆನ್‌ಲೈನ್‌ನಿಂದ ಸಾಲದ ದಾಖಲೆ ಪತ್ರಗಳನ್ನು ಸ್ಕ್ಯಾನ್ ಮಾಡಿ ಮತ್ತೆ ಅಪ್‌ಲೋಡ್ ಮಾಡಬೇಕು.

2. ಆನ್‌ಲೈನಿನಲ್ಲಿ ಅಪ್‌ಲೋಡ್ ಮಾಡಿದ ನಂತರ, ಸಹಿ ಹಾಕಿಟ್ಟುಕೊಂಡ ಸಾಲ ಮಂಜೂರಾತಿ ಪತ್ರ ಹಾಗೂ ತಗಾದೆ ಪತ್ರ, ಹಿಂದೆ ಸಲ್ಲಿಸಿದ ಸಾಲದ ಅರ್ಜಿ ಮತ್ತು ನೀಡಿರುವ KYC ದಾಖಲೆಗಳ ಪ್ರತಿಗಳೊಂದಿಗೆ, ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಸಲ್ಲಿಸಬೇಕು,

**ಮೂರನೇ ಹಂತ:**

ಸಾಲ ಅನುಮೋದನೆಯ ನಂತರ ಕೇಂದ್ರ ಕಛೇರಿಯಿಂದ ಕೂಡಲೇ ಸಾಲದ ಮೊತ್ತವನ್ನು NEFT ಮೂಲಕ ಪ್ರತಿಯೋರ್ವ ಆಯ್ಕೆಯಾದ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುವುದು,

**ಸಾಲ ಬಿಡುಗಡೆಯ ನಂತರ:**

ಮೈಕ್ರೋ ಸಾಲದ ವಿರಾಮಾವಧಿ 2 ತಿಂಗಳು ಮಾತ್ರ, ಸಬ್ಸಿಡಿ ಮೊತ್ತ ರೂ.2,000/- ಬಿಟ್ಟು ರೂ.8,000/-ಸಾಲದ ಮೊತ್ತವನ್ನು ಶೇಕಡಾ 4ರ ಬಡ್ಡಿಯೊಂದಿಗೆ 10 ಸಮಾನ ಮಾಸಿಕ ಕಂತುಗಳಲ್ಲಿ ರೂ.8,20/-ರಂತೆ ಮರುಪಾವತಿ ಮಾಡತಕ್ಕದ್ದು,

**ಆಯ್ಕೆ ವಿಧಾನ:-** ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ, ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

5. **ಗಂಗಾಕಲ್ಯಾಣ ಯೋಜನೆ:** ಈ ಯೋಜನೆಯಲ್ಲಿ ಗುರಿಗೆ ಅನುಗುಣವಾಗಿ ಸ್ವೀಕರಿಸುವ ಅರ್ಜಿ ಹಾಗೂ ದಾಖಲಾತಿಗಳಾದ ನಿಗದಿತ ಅರ್ಜಿ, ಜಾತಿ ಮತ್ತು ಆದಾಯ ದೃಢೀಕರಣ (ನಗರ ಪ್ರದೇಶಕ್ಕೆ ರೂ. 1,03,000/- ಮತ್ತು ಗ್ರಾಮೀಣ ಪ್ರದೇಶಕ್ಕೆ ರೂ.81,000/-ರ ಒಳಗೆ) ಆರ್.ಟಿ.ಸಿ. ಮ್ಯೂಟೇಶನ್, ಸಣ್ಣ ಮತ್ತು ಅತಿ ಸಣ್ಣ ರೈತರ ದೃಢೀಕರಣ, ಇ.ಸಿ (13 ವರ್ಷದವರೆಗೆ), ಚೆಕ್ಕುಬಂದಿ, ವಂಶವೃಕ್ಷ ಜಮೀನಿನಲ್ಲಿ ಭಾವಚಿತ್ರ, ಜಮೀನು ಕನಿಷ್ಠ 1.20 ಎಕರೆಯಿಂದ 5.00 ಎಕರೆ ಒಳಗೆ ಹೊಂದಿರುವ ಫಲಾಪೇಕ್ಷೆಯಿಂದ ಅರ್ಜಿ ದಾಖಲಾತಿಗಳನ್ನು ಪರಿಶೀಲಿಸಿ ಸ್ವೀಕರಿಸಿದ ಅರ್ಜಿಗಳನ್ನು ಆಯಾಯ ಮತಕ್ಷೇತ್ರಗಳ ಶಾಸಕರ ನೇತೃತ್ವದ ಆಯ್ಕೆ ಸಮಿತಿಯಿಂದ ಈ ಅರ್ಜಿಗಳನ್ನು ಆಯ್ಕೆ ಮಾಡಿ ಕೊಳವೆ ಬಾವಿ ಕೊರೆಯಲು ಕೇಂದ್ರ ಕಛೇರಿಗೆ ಪ್ರಸ್ತಾವನೆ ಕಳುಹಿಸಿಕೊಡಲಾಗುವುದು. ಪ್ರತಿ ಕೊಳವೆ ಬಾವಿ ಘಟಕದ ವೆಚ್ಚ 2.00ಲಕ್ಷಗಳಾಗಿದ್ದು. ಈ ಮೊತ್ತದಲ್ಲಿ ಕೊಳವೆ ಬಾವಿ ಕೊರೆಯುವಿಕೆ, ಪಂಪ ಮೋಟಾರು ಪೂರೈಕೆ ಮತ್ತು ವಿದ್ಯುದ್ದೀಕರಣ ಠೇವಣಿ ವೆಚ್ಚವನ್ನು ನಿಗಮವು ಭರಿಸುವುದು.

**ಆಯ್ಕೆ ವಿಧಾನ:-** ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿ, ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಯಾದ ನಂತರ ಕೊಳವೆಬಾವಿ ಕೊರೆಯಿಸಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

6. **ಟ್ಯಾಕ್ಸಿ/ಗೂಡ್ಸ್/ಆಟೋರಿಕ್ಷಾ ವಾಹನ ಖರೀದಿ ಸಹಾಯಧನ ಯೋಜನೆ:** ಸದರಿ ಯೋಜನೆಯಡಿ ಟ್ಯಾಕ್ಸಿ/ಗೂಡ್ಸ್ ಮತ್ತು ಪ್ಯಾಸೆಂಜರ್ ಆಟೋರಿಕ್ಷಾ ವಾಹನವನ್ನು ಖರೀದಿಸಲು ರೂ.75,000/ ಸಹಾಯಧನ ನೀಡಲಾಗುತ್ತದೆ. ಉಳಿದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಸಾಲವನ್ನು ಪಡೆಯಬೇಕು. ಈ ಯೋಜನೆಯಡಿಯಲ್ಲಿ ಖರೀದಿಸುವ ವಾಹನದ ಮೌಲ್ಯವು ಕನಿಷ್ಠ ರೂ.1.50 ಲಕ್ಷಗಳಿಂದ ಗರಿಷ್ಟ ರೂ. 7.50 ಲಕ್ಷಗಳಾಗಿರತಕ್ಕದ್ದು. (ತೆರಿಗೆಯನ್ನು ಹೊರತುಪಡಿಸಿ)

**ಆಯ್ಕೆ ವಿಧಾನ:-** ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿಯಲ್ಲಿ ಅನುಮೋದಿತ ಪ್ರಸ್ತಾವನೆಗಳಿಗೆ ಕೇಂದ್ರ ಕಛೇರಿಯಿಂದ ಸಹಾಯಧನ ಮಂಜೂರು ಮಾಡಲಾಗುತ್ತದೆ.

## ಜಿಲ್ಲಾ ವ್ಯವಸ್ಥಾಪಕರ ಅಧಿಕಾರ ಮತ್ತು ಕರ್ತವ್ಯಗಳು:

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಜಿಲ್ಲಾ ಕಛೇರಿಯ ಪೂರ್ಣ ಆಡಳಿತ ನಿರ್ವಹಣೆ, ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆ, ಬ್ಯಾಂಕ್/ಹಣಕಾಸು ಸಂಸ್ಥೆಗಳೊಡನೆ ವ್ಯವಹಾರ, ಪ್ರಕಟಣೆ ನೀಡುವುದು, ಅರ್ಜಿ ಪಡೆದು ಜಿಲ್ಲಾ ಸಮಿತಿ ಅನುಮೋದನೆ ಪಡೆದು ಗುರಿಯನ್ವಯ ಸಾಲ ಸೌಲಭ್ಯಗಳನ್ನು ವಿತರಿಸಿ, ಲೆಕ್ಕ ಪತ್ರ, ಇತ್ಯಾದಿ ಕಾರ್ಯಗಳನ್ನು ನಿರ್ವಹಣೆ ಮಾಡುವ ಅಧಿಕಾರ ಹೊಂದಿರುತ್ತಾರೆ.

### ಜಿಲ್ಲಾ ವ್ಯವಸ್ಥಾಪಕರುಗಳ ಕರ್ತವ್ಯಗಳು:

1. ಜಿಲ್ಲಾ ಕಛೇರಿಯ ಸಂಪೂರ್ಣ ಆಡಳಿತ ನಿರ್ವಹಣೆ, ಗುರಿಯನ್ವಯ ಎಲ್ಲಾ ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆಯ ಜವಾಬ್ದಾರಿ ಮತ್ತು ಸಾಲ ವಸೂಲಾತಿಗೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.
2. ಅಗತ್ಯ ಸಭೆಗಳಿಗೆ ಹಾಜರಾಗುವುದು, ಯೋಜನೆಗಳ ಬಗ್ಗೆ ಜನ ಪ್ರತಿನಿಧಿಗಳಿಗೆ ಮಾಹಿತಿ ನೀಡುವುದು.
3. ವಿವಿಧ ಇಲಾಖೆಗಳು, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಯೋಜನೆಯ ಅನುಷ್ಠಾನಕ್ಕಾಗಿ ಸಮನ್ವಯಾಧಿಕಾರಿಯಾಗಿ ಕೆಲಸ ನಿರ್ವಹಿಸುವುದು,
4. ಸರ್ಕಾರದ ವಿವಿಧ ಆದೇಶಗಳಲ್ಲಿ ಮತ್ತು ನಿಗಮದ ಆದೇಶ, ಪತ್ರ ಮತ್ತು ಸುತ್ತೋಲೆಗಳಲ್ಲಿ ವಹಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವುದು,
5. ತಿಂಗಳಿಗೆ ಕನಿಷ್ಟ 10 ದಿನಗಳ ಪ್ರವಾಸ ಮಾಡಿ, ಸಾಲ ವಸೂಲಾತಿ ಮತ್ತು ಘಟಕ ತಪಾಸಣೆ ಮಾಡುವುದು, ಸಂಧರ್ಬಾನುಸಾರ ವಿವಿಧ ತಾಲೂಕು ಹೋಬಳಿ ಕೇಂದ್ರಗಳಲ್ಲಿ ವಾಸ್ತವ್ಯ ಮಾಡುವುದು.
6. ಜಿಲ್ಲೆಯಲ್ಲಿ ಆಡಳಿತಾತ್ಮಕ ಮುಖ್ಯಸ್ಥರಾಗಿರುವ ಜಿಲ್ಲಾ ವ್ಯವಸ್ಥಾಪಕರು ಜಿಲ್ಲೆಯಲ್ಲಿನ ಎಲ್ಲಾ ಆಗು ಹೋಗುಗಳಿಗೆ ಜವಾಬ್ದಾರರಾಗಿರುತ್ತಾರೆ.
7. ನಿಗಮಕ್ಕೆ ಸಂಬಂಧಿಸಿದಂತೆ ಹಣಕಾಸಿನ ನಿರ್ವಹಣೆ ವೆಚ್ಚದ ಬಗ್ಗೆ ಆಗಿಂದಾಗ್ಗೆ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಆದೇಶ, ಸುತ್ತೋಲೆ ಮತ್ತು ಮಾರ್ಗದರ್ಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
8. ನಿಗಮದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಹಿಸಿದ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

### ನಿಗಮ ರಚನೆ ಜಿಲ್ಲಾ ಮಟ್ಟದಲ್ಲಿ

ಜಿಲ್ಲಾ ವ್ಯವಸ್ಥಾಪಕರು

↓

ಅಭಿವೃದ್ಧಿ ಪರಿವೀಕ್ಷಕರು

↓

ಕಛೇರಿ ಡಾಟಾ ಎಂಟ್ರಿ ಆಪರೇಟರ್

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಕಛೇರಿ ಕೆಲಸದ ಹಂಚಿಕೆ ಕುರಿತು.

**ವಿಷಯ ನಿರ್ವಾಹಕರು: ಎ1**

| | |
|---|---|
| 1 | ಟ್ಯಾಕ್ಸಿ/ಗೂಡ್ಸ್/ಆಟೋರಿಕ್ಷಾ ವಾಹನ ಖರೀದಿ ಯೋಜನೆ |
| 2 | ಶ್ರಮಶಕ್ತಿ ಯೋಜನೆ |
| 3 | ಕಿರುಸಾಲ ಯೋಜನೆ |
| 4 | ಗಂಗಾ ಕಲ್ಯಾಣ ಯೋಜನೆ |
| 5 | ಚುಕ್ಕೆಗುರುತಿನ ಗುರುತಿಲ್ಲದ ಪ್ರಶ್ನೆಗೆ ಉತ್ತರಿಸುವ ಕುರಿತು ಕಡತ ನಿರ್ವಹಣೆ |
| 6 | ಕಛೇರಿಗೆ ಸಂಬಂಧಿಸಿದಂತೆ ಬಿಲ್ಲುಗಳ ತಯಾರಿ ಮತ್ತು ಪಾವತಿ |
| 7 | ನಿರ್ದೇಶನಾಲಯದಿಂದ ಬಂದ ಇತರೆ ಕಡತಗಳ ನಿರ್ವಹಣೆ |
| 8 | ಆಡಿಟ್ ರಿಪೋರ್ಟ್ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ಕಾರ್ಯ |
| 9 | ಎಲ್ಲಾ ಸಾಲಗಳ ಮರುಪಾವತಿ ದಾಖಲೆ ನಿರ್ವಹಣೆ |
| 10 | ನಗದು ಪುಸ್ತಕ ನಿರ್ವಹಣೆ |
| 11 | ಮಾಹಿತಿ ಹಕ್ಕು ಕಾಯ್ದೆಯಡಿ ಬರುವ ಅರ್ಜಿಗಳ ವಿಲೇವಾರಿ, ಮತ್ತು ವರದಿಗಳ ಕಡತ ವಹಿಗಳ ನಿರ್ವಹಣೆ |
| 12 | ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡಲಾದ ಅನುದಾನಗಳ ನಿರ್ವಹಣೆ |
| 13 | ಸಾದಿಲ್ವಾರು ಕಡತದ ವೆಚ್ಚ ನಿರ್ವಹಣೆ |

**ವಿಷಯ ನಿರ್ವಾಹಕರು: ಎ2**

| | |
|---|---|
| 1 | ಅರಿವು ಯೋಜನೆ |
| 2 | ನೇರಸಾಲ (ಅರಿವು ವಿದೇಶ ವ್ಯಾಸಾಂಗ) |
| 3 | ಸಾಲ ಮರುಪಾವತಿ ಬಗ್ಗೆ ನಿರ್ವಹಣೆ |
| 4 | ನಿರ್ದೇನಾಲಯದಿಂದ ಬಂದ ಇತರೆ ಕಡತಗಳ ನಿರ್ವಹಣೆ |
| 5 | ಇಲಾಖಾ ಸಭೆಯ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡುವುದು |
| 6 | ಎಲ್ಲಾ ಸಭೆಗಳ ಮಾಹಿತಿ ಪುಸ್ತಕೆ ತಯಾರಿ |

**ವಿಷಯ ನಿರ್ವಾಹಕರು: ಬಿ1**

| | |
|---|---|
| 1 | ಕಿರುಸಾಲ– ಕೋವಿಡ್–19 ಸಾಲ ಯೋಜನೆ |
| 2 | ಎಲ್ಲಾ ಯೋಜನೆಗಳ ಮಾಹಿತಿ ಸಂಗ್ರಹಣೆ |
| 3 | ಎಲ್ಲಾ ಯೋಜನೆಗಳ ಆಯ್ಕೆ ಸಮಿತಿ ಸಭೆಯ ಆಯ್ಕೆ ಪಟ್ಟಿ ಹಾಗೂ ನಡವಳಿ ತಯಾರಿ |
| 4 | ಎಲ್ಲಾ ಯೋಜನೆಗಳ ಆನ್‌ಲೈನ್ ಕಾರ್ಯ |
| 5 | ಜಿಲ್ಲಾ ಕಛೇರಿಯ ಪತ್ರಗಳ ತಯಾರಿ |
| 6 | ಡಿ.ಸಿ.ಬಿ ನಿರ್ವಹಣೆ |

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆಯ ವಿವರಗಳು ಈ ಕೆಳಕಂಡಂತಿದೆ.**

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ)
ನಂ.5-1-75/1, ಪ್ಲಾಟ್ ನಂ.1, ನೆಲಮಹಡಿ ಅಮರ್-ರಿಝೇನ್ಸಿ,
ಚರ್ಚ್ ಹತ್ತಿರ, ಜೆ.ಎಂ.ಎಫ್.ಸಿ.ಕೋರ್ಟ ಎದುರು
ಸ್ಟೇಶನ್ ಮುಖ್ಯ ರಸ್ತೆ ಯಾದಗಿರಿ-585202
ದೂ:08473-253785

ಇ-ಮೇಲ್: yadgir.kmdc@karnataka.gov.in / kmdcyadgir@gmail.com

ವೆಬ್‌ಸೈಟ್ :www.kmdc.karnataka.gov.in

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆಯ ವಿವರಗಳು ಈ ಕೆಳಕಂಡಂತಿದೆ.**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ)
ವಿಶ್ವೇಶ್ವರಯ್ಯ ಕೇಂದ್ರ, 12ನೇ ಮಹಡಿ, ಮುಖ್ಯ ಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-560001,
ದೂರವಾಣಿ ಸಂಖ್ಯೆ: 080-22860999
080-22864782

**ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ.**

**ಮಾಹಿತಿ ಹಕ್ಕು ಕಾಯ್ದೆ 2005 ಸೆಕ್ಷನ್ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ**

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ)
ಎಸ್.ಆರ್. ರೆಸಿಡೆನ್ಸಿ, ಪ್ಲಾಟ್ ನಂ: 1881 ಮೊದಲನೆ ಮಹಡಿ,
ಎಲ್.ಎಸ್. ರಾಠಿ ಆಸ್ಪತ್ರೆ ಎದುರುಗಡೆ, ಹಳೆ ಜೇವರ್ಗಿ ರಸ್ತೆ, ಕಲಬುರಗಿ-585103
ಫೋನ್ ನಂ: 08472-232425

ಇ-ಮೇಲ್: dmkmdcklb@gmail.com

ವೆಬ್‌ಸೈಟ್ :www.kmdc.karnataka.gov.in

**ಮಾಹಿತಿ ಹಕ್ಕು ಕಾಯ್ದೆ 2005 ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಪ್ರಾಧಿಕಾರ**

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ)
ವಿಶ್ವೇಶ್ವರಯ್ಯ ಕೇಂದ್ರ, 12ನೇ ಮಹಡಿ,
ಮುಖ್ಯ ಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-560001.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ
ನಿಗಮ (ನಿ), ಕಲಬುರಗಿ.